# ಶ್ರೀ ಮಾರಿಕಾಂಬಾ ದೇವಸ್ಥಾನದ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸುವ ಬಾಬುದಾರರು ಹಾಗೂ ಅವರ ಸೇವೆಗಳು

| ಅ.ನಂ | ಹೆಸರು | ಅ.ನಂ | ಹೆಸರು |
|---|---|---|---|
| 1 | ಅಜಯ ಅನಂತ ನಾಡಿಗ್ | 27 | ವೀರಭದ್ರ ಪರಶಾ ಗೌಡಾ , ಕಬ್ಬೆ |
| 2 | ಜಗದೀಶ ನಾಗಭೂಷಣ ಗೌಡಾ ( ಕಸಬಾ) | 28 | ಬಸವಣ್ಣಿ ಹನುಮಂತ ಕಬ್ಬೆ |
| 3 | ಅಶೋಕ .ಎಮ್. ಪೂಜಾರ | 29 | ಕೃಷ್ಣಾ ಬಂಗಾರಿ ಚಲುವಾದಿ |
| 4 | ವಿನೋದ.ಆರ್. ಪೂಜಾರ | 30 | ಶ್ರೀಮತಿ ಮಾಸ್ತಿ ತಂದೆ ಫಕೀರಾ ಮೇತ್ರಿ |
| 5 | ಮದನ ಚಂದ್ರಶೇಖರ ಆರೇರ | 31 | ಗಣಪತಿ ಆಯಿತ್ರಾ |
| 6 | ಮಂಜಾ ಸಣ್ಯಾ ಗುಡ್ಡದಮನೆ | 32 | ಮಂಜಾ ನಾಗ್ಯಾ ಮೇದಾರ |
| 7 | ಜಗದೀಶ ಮಧುಕೇಶ್ವರ ಕುರುಬರ | 33 | ದಯಾನಂದ ವಾಮನ ಗುಡಿಗಾರ |
| 8 | ರಮೇಶ ರಾಮಾ ದಬ್ಬೆ | 34 | ಸುರೇಶ ಬಸಪ್ಪ ಸ್ವಾದಿ |
| 9 | ಬಸವರಾಜ ಶಂಕರ ಚಕ್ರಸಾಲಿ | 35 | ಕೆರಿಯಾ ಎಲ್ಲಾ ಶಿರಹಟ್ಟಿ |
| 10 | ಮಹಾಬಲೇಶ್ವರ ಬಂಗಾರಿ ಎಸಳೇ | 36 | ಕಮಲಾಕರ ಕೂಶಪ್ಪಾ ಭಜಗುಳಿ |
| 11 | ಮಡಿವಾಳ ಕುಟುಂಬ | 37 | ರವಿದಾಸ ಬಂಗಾರಿ ಕಾನಡೆ |
| 12 | ಸುಭಾಸ ಕೆರಿಯಾ ಕುರುಬರ | 38 | ಲೋಕೇಶ ಪರಶು ಜೋಗಳೇಕರ |
| 13 | ಏಳುಕೋಟಿ ಸುಬ್ರಾಯ ರಿಕಾರೆ | 39 | ರಮೇಶ ಬಂಗಾರಿ ಜೋಗಳೇಕರ |
| 14 | ಶ್ರೀಕಾಂತ ನಾರಾಯಣ ಶೇಟ್ | 40 | ಸುರೇಶ ನಾಗೇಂದ್ರ ನೇತ್ರಕರ |
| 15 | ಪರಶುರಾಮ ಮಾದೇವ ನಾಯ್ಕ | 41 | ಸದಾ ಕೆರಿಯಾ ಜೋಗಳೇಕರ |
| 16 | ಗಿರೀಶ ಮಾಧವ ಆಚಾರಿ | 42 | ಶ್ರೀಮತಿ ವಿಜಯಲಕ್ಷ್ಮೀ ತುಮಕೂರ |
| 17 | ವಿನಾಯಕ ಅನಂತ ಆಚಾರಿ | 43 | ಶ್ರೀಮತಿ ರಾಧಾ ದೇವೇಂದ್ರ ಸಿರ್ಸೀಕರ |
| 18 | ಪರಶುರಾಮ ನಾಗೇಶ ಬಡಗಿ, ಬಚಗಾಂವ | 44 | ಶ್ರೀಮತಿ ರಾಜೀವಿ ಕೋಂ ರಾಮಕೃಷ್ಣ ನಾಯ್ಕ |
| 19 | ವಿಠಲ ಶಾಂತಾರಾಮ ಹೆಗಡೆ , ಲಿಂಗದಕೋಣ | 45 | ಶ್ರೀಮತಿ ಸಾವಿತ್ರಿ ಕೃಷ್ಣಾ ಸಿರ್ಸೀಕರ |
| 20 | ಬಸವರಾಜ ಬಂಗಾರಪ್ಪ ಗೌಡಾ , ರಾಗಿಹೊಸಳ್ಳಿ | 46 | ಶ್ರೀಮತಿ ಯಲ್ಲಮ್ಮ ಬಂಗಾರಿ ಚಲುವಾದಿ |
| 21 | ಮಂಜಾ ಗಿಡ್ಡಾ ಎಸಳೇ | 47 | ಶ್ರೀಮತಿ ರಾಧಾ ಮುಕುಂದ ಚಲುವಾದಿ |
| 22 | ನಿಂಗಾ ನಾಗಪ್ಪ ಜಡೇ, ಭಿಕ್ಕನಳ್ಳಿ | 48 | ಶ್ರೀಮತಿ ಸವಿತಾ ಗಣಪತಿ ಶೆಟ್ಟಳ್ಳಿ |
| 23 | ದುರ್ಗಾ ಗೌರ್ಯಾ ನರೇಬೈಲ್ | 49 | ಶ್ರೀಮತಿ ನಾಗವೇಣಿ ಕೋಂ ನಿಂಗಾ ಚಲುವಾದಿ |
| 24 | ಗಜಾನನ ನಾರಾಯಣ ಮಡಿವಾಳ, ಬಚಗಾಂವ | 50 | ಶ್ರೀಮತಿ ವಿನಯಾ ವಿಲಾಸ ನಾಯ್ಕ |
| 25 | ನರಸಿಂಹ ಓಮು ಮರಾಠಿ, ಪೆಡಂಬೈಲ್ | 51 | ಶ್ರೀಮತಿ ಗೀತಾ ಕೋಂ ಜಗದೀಶ ಚಲುವಾದಿ |
| 26 | ನಾಗೇಶ ಚೆನ್ನಾ ದೇವಡಿಗ, ಲಂಡಕನಳ್ಳಿ(ಎಸಳೇ) | 52 | ಶ್ರೀಮತಿ ಶಾಂತಿ ತಾಯಿ ಗುತ್ಯಕ್ಕ |

| | | | |
|---|---|---|---|
| 53 | ಶ್ರೀಮತಿ ಮಲ್ಲಮ್ಮ ಕೋಂ ಕನ್ನಪ್ಪ ಬಂಗೇರ | 59 | ಸುರೇಶ ವಿಠೋಬ ಮಲ್ಲಾಪೂರ |
| 54 | ಶ್ರೀಮತಿ ಹುಚ್ಚವ್ವ ತಾಯಿ ದುರ್ಗಿ ಅಸಾದಿ | 60 | ಅನಂತ ನಾರಾಯಣ  ನಾಯ್ಕ, ಹುಸುರಿ |
| 55 | ಶ್ರೀಮತಿ ಫಕೀರಿ ತಾಯಿ ದುರ್ಗಿ ಅಸಾದಿ | 61 | ರಾಮಕೃಷ್ಣ ಸುಬ್ರಾಯ ಭಟ್ಟ, ಕೆರೇಕೈ |
| 56 | ಅಣ್ಣಪ್ಪ ಯಲ್ಲಪ್ಪ ಚಲುವಾದಿ | 62 | ಭಾಸ್ಕರ ಮಹಾಬಲೇಶ್ವರ ಹೆಗಡೆ, ಲಿಂಗದಕೋಣ |
| 57 | ಯಲ್ಲೋಜಿ ನಾಗಪ್ಪ ಭಿಕ್ಕನಳ್ಳಿ | 63 | ದಿವ್ಯಸ್ಪತಿ ವೆಂಕಟ್ರಮಣ ಹೆಗಡೆ, ಲಿಂಗದಕೋಣ |
| 58 | ಸುಬ್ರಾಯ ಗಣಪತಿ ಜೋಶಿ | 64 | ವೆಂಕಟ್ರಮಣ ನಾರಾಯಣ ನಾಯ್ಕ, ಬ್ಯಾಗದ್ದೆ |
| | | 65 | ಧಾಕು ಬಾಬು ಮರಾಠಿ , ಬಂಡಲ |

ಶ್ರೀ ಮಾರಿಕಾಂಬಾ ದೇವಾಲಯದ ಆಡಳಿತದ ನಿಯಮಗಳ ಪ್ರಕಾರ 'ಬಾಬುದಾರ' ಅಂದರೆ "ತನ್ನ ಕುಟುಂಬ ಅಥವಾ ವರ್ಗದ ಪದ್ಧತಿ ಮತ್ತು ಪರಂಪರೆಗೆ ಅನುಸಾರವಾಗಿ ಶ್ರೀ ದೇವಸ್ಥಾನದಲ್ಲಿ ಸೇವೆ ಮಾಡತಕ್ಕವನು ಅಥವಾ ಮಾಡತಕ್ಕವಳು. ಅಥವಾ ಇಂತಹ ವ್ಯಕ್ತಿಯ ಸ್ಥಾನವು ಬರಿದಾದಲ್ಲಿ ಆ ಸ್ಥಾನದಲ್ಲಿ ಮಂಡಳದಿಂದ ನಿಯಮಿಸಲ್ಪಟ್ಟ ವ್ಯಕ್ತಿಯು".

ಬಾಬುದಾರರು ಶ್ರೀ ದೇವಿಯ ಸನ್ನಿಧಿಯಲ್ಲಿ ಕಾಲಕಾಲಕ್ಕೆ  ಜರುಗುವ ಕಾರ್ಯಕ್ರಮಗಳಲ್ಲಿ ತಮ್ಮ ಪಾಲಿನ ಸೇವೆಯನ್ನು ಮಾಡುತ್ತಾರೆ. ಬಾಬುದಾರರು ಶ್ರೀ ದೇವಾಲಯಕ್ಕೆ ವಿಶ್ವಾಸಪೂರ್ವಕವಾಗಿದ್ದು ಶ್ರೀ ದೇವಾಲಯದ ಬಗ್ಗೆ ಭಕ್ತರಲ್ಲಿ ವಿಶ್ವಾಸ ಮತ್ತು ಗೌರವಕ್ಕೆ ಕುಂದು ಬರದಂತೆ ನಡೆದುಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ.

ಅಂತೆಯೇ ನಿರ್ದಿಷ್ಟ ಪಡಿಸಿದ ಕರ್ತವ್ಯಗಳನ್ನು ತಕ್ಕ ಕಾಲಕ್ಕೆ ಯೋಗ್ಯ ರೀತಿಯಿಂದ ಮಾಡದ ಬಾಬುದಾರನ ಬಗ್ಗೆ ಮಂಡಳವು ಅವನ ಹೇಳಿಕೆ ಕೇಳಿಕೊಂಡು ವಿಚಾರ ಮಾಡಿ ನಿರ್ಣಯಕ್ಕೆ ಬಂದರೆ ಅಂಥವನ ಹೆಸರನ್ನು ಬಾಬುದಾರರ ಯಾದಿಯಿಂದ ಕಿತ್ತು ಹಾಕಬಹುದು. ಹೀಗೆ ಕಿತು ಹಾಕಲ್ಪಟ್ಟ ಬಾಬುದಾರನು ಪ್ರತಿಫಲದ ಯಾವತ್ತೂ ಹಕ್ಕನ್ನು ಕಳೆದುಕೊಳ್ಳುತ್ತಾನೆ ಮತ್ತು ರೂಢಿಯಿಂದ ಬಂದ ಸೇವೆಯ ಹಕ್ಕನ್ನು ಸಹಾ ಕಳೆದುಕೊಳ್ಳುತ್ತಾನೆ.

ಯಾವುದೇ ಬಾಬುದಾರನು ತನ್ನ ಕರ್ತವ್ಯ ಮಾಡುವ ಸಮಯದಲ್ಲಿ ಉಪಸ್ಥಿತನಿಲ್ಲದಿದ್ದರೆ ಇಲ್ಲವೇ ತನ್ನ  ಕರ್ತತವ್ಯವನ್ನು ಮಾಡಲು ಅಲ್ಲಗಳೆದರೆ ಆ ಕೆಲಸವನ್ನು ಅಧ್ಯಕ್ಷರು ಇನ್ನೊಬ್ಬದಿಂದ ಮಾಡಿಸಿಕೊಳ್ಳಬಹುದು. ಆದರೇ ಬಾಬುದಾರನು ಯೋಗ್ಯ ಕಾರಣವನ್ನು ನೀಡಿ ಅಧ್ಯಕ್ಷರಿಂದ ಅನುಮತಿ ಪಡೆದು ಮೊದಲೇ ತನ್ನ ಕರ್ತವ್ಯವನ್ನು ಮಾಡಲು ತಾತ್ಪೂರ್ತಿಕವಾಗಿ ಮತ್ತೊಬ್ಬನನ್ನು ನಿಯಮಿಸಿದರೂ ಬಾಬುದಾರನಾತೆಯಿಂದ ಇದ್ದ ಅವ ಜವಾಬ್ದಾರಿಯು ತಪ್ಪುವುದಿಲ್ಲ.

ಶ್ರೀ ದೇವಾಲಯದಲ್ಲಿ ಬಾಬುದಾರರ ಬಗ್ಗೆ ಒಂದು ರಜಿಸ್ಟರನ್ನು ಇಡಲಾಗಿದ್ದು ಅದರಲ್ಲಿ ಬಾಬುದಾರರ ಕುಟುಂಬದ ಹೆಸರು ಹಾಗೂ ಅವರು  ಮಾಡಬೇಕಾದ ಸೇವೆ ಬಗ್ಗೆ ವಿವರಿಸಲಾಗಿದೆ.

ಬಾಬುದಾರನು ಕೆಲಸದಿಂದ ನಿವೃತ್ತನಾದರೆ ಅಥವಾ ನಿಧನ ಹೊಂದಿದರೆ ಅಥವಾ ಕಿತ್ತೆಸೆಯಲ್ಪಟ್ಟರೆ ಅವನ ಸ್ಥಳದಲ್ಲಿ ಬರುವವನನ್ನು ಯೋಗ್ಯ ಚೌಕಶಿಯಿಂದಲೂ ಇತರ ಬಾಬುದಾರರ ಅಭಿಪ್ರಾಯಗಳನ್ನು ವಿಚಾರಿಸಿಯೂ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

# : ಬಾಬುದಾರರ ವಿವರ :

**1. ಶಿರಸಿ ನಾಡಿಗರ ಕುಟುಂಬ :**

ಶ್ರೀ ಮಾರಿಕಾಂಬಾ ದೇವಿಯ ಜಾತ್ರೆಯು ನಿಶ್ಚಯವಾದ ಕೂಡಲೇ ಶ್ರೀ ದೇವಿಗೆ ಮಂಗಳಾರತಿ ಮಾಡಿ ನಿರ್ವಿಘ್ನವಾಗಿ ಸಾಂಗವಾಗಿ ನೆರವೇರಿಸಿಕೊಡುವಂತೆ ಪ್ರಾರ್ಥಿಸಿಕೊಳ್ಳುವುದು. ಐದನೇಯ ಹೊರಬೀಡಿನಿಂದ ತಿರುಗಿ ಪಲ್ಲಕ್ಕಿ ಬಂದಾಗ ಜಾತ್ರೆಯ ಗದ್ದಿಗೆಯ ಹತ್ತಿರ ಅಂಕೆಯ ವಿಧಾನ (ವಿಸರ್ಜನೆ)ದ ಕಾಲಕ್ಕೆ ಮಂಗಳಾರತಿ ಮಾಡುವುದು. ಜಾತ್ರೆಯ ಸಮಯದಲ್ಲಿ ಮೊದಲ ದಿನದ ಕಾರ್ಯಕ್ರಮ ಶ್ರೀ ದೇವಿಯ ಕಲ್ಯಾಣ ಮಹೋತ್ಸವ. ನವವಧುವಾಗಿ ಸಿಂಗಾರಗೊಂಡ ಶ್ರೀ ಮಾರಿಕಾಂಬೆಯ ತೌರಿನ ಪ್ರಮುಖರಾಗಿ ದೇವಿಗೆ ಬಾಸಿಂಗ ಕಟ್ಟಿ ಪ್ರಥಮ ಪೂಜೆ ಮಾಡುವರು. ಜಾತ್ರೆಯ ದಿನಗಳಲ್ಲಿ ಬೆಳಿಗ್ಗೆ ಹಾಗೂರಾತ್ರಿ ಪ್ರಥಮ ಹಾಗೂ ಕೊನೆಯ ಮಂಗಳಾರತಿ ಮಾಡುವುದು. ಯುಗಾದಿಗೆ ಪುನಃ ದೇವಿ ಪ್ರತಿಷ್ಠಾಪನೆ ಮಾಡಿದಾಗ ಪ್ರಥಮ ಪೂಜೆ ಮಾಡುವುದು. ದಸರೆಯ ದಿನ ಮೆರವಣಗೆಯು ಬನ್ನಿಕಟ್ಟೆಗೆ ಹೋಗುವ ಮೊದಲು ಶ್ರೀ ಹನುಮಂತ ದೇವರಿಗೆ ಮಂಗಳಾರತಿ ಮಾಡಿ ನಂತರ ಬನ್ನಿ ಕಟ್ಟೆಯಲ್ಲಿ ಮಂಗಳಾರತಿ ಮಾಡುವುದು.

2. **ಶಿರಸಿ ಕಸಬೆ ಗೌಡರ ಕುಟುಂಬ** :

ಶಿರಸಿಯ ರೈತರು ಸಲ್ಲಿಸುವ ಸೇವೆಯ ಎಲ್ಲ ಮೇಲ್ವಿಚಾರಣೆ ಇವರದ್ದಾಗಿದ್ದು ತುಂಬ ಜವಾಬ್ದಾರಿಯನ್ನು ಹೊಂದಿರುವ ಬಾಬುದಾರರು.

**3. ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಪೂಜಾರಿ ಕುಟುಂಬಗಳು ಎರಡು :**

ಇವರು ಶ್ರೀ ಮಾರಿಕಾಂಬಾ ಹಾಗಗೂ ಶ್ರೀ ಮರ್ಕಿ-ದುರ್ಗಿ ದೇವಸ್ಥಾನದ ಅರ್ಚಕತನದ ಕೆಲಸವನ್ನು ನಿರ್ವಹಿಸುತ್ತಾರೆ.

**4. ಶಿರಸಿ ಕಟ್ಟೇರ ಕುಟುಂಬ :**

ಶಿರಸಿ ರೈತರ ಮುಖ್ಯ ಪ್ರಮುಖರಾಗಿರುವ ಇವರು ರೈತರ ಹಾಗೂ ರೈತ ಮುಖ್ಯಸ್ಥರ ಸಹಾಯದಿಂದ ಈ ಕೆಳಗೆ ವಿವರಿಸಿದ ಕೆಲಸಗಳನ್ನು ಮಾಡಬೇಕಾಗುತ್ತದೆ.

ಶ್ರೀ ದೇವಿಯ ಜಾತ್ರೆಯ ಕಾಲದಲ್ಲಿ ನಡೆಯುವ ಹೊರಬೀಡಿನ ವ್ಯವಸ್ಥೆ ಮಾಡುವುದು. ಕೊನೆಯ ಎರಡು ಹೊರಬೀಡುಗಳಲ್ಲಿ ಅಡಿಗೆ ಮಾಡುವುದು. ರಥದ ಕಟ್ಟೆಗೆ ತರುವುದು. ನವರಾತ್ರಿ ಹಾಗೂ ಜಾತ್ರೆಯ ದಿನಗಳಲ್ಲಿ ಪಡಲಿಗೆಗಳಿಗೆ ಉಡಿಯ ಸಾಮಾನು ತುಂಬುವುದು. ಶ್ರೀ ದೇವಿಯ ವಿಗ್ರಹವನ್ನು ಕಳಚುವುದಕ್ಕೆ ಹಾಗೂ ಕೂಡಿಸುವುದಕ್ಕೆ ಸಹಾಯ ಮಾಡುವುದು. ಜಾತ್ರೆಯ ದಿನಗಳಲ್ಲಿ ಕಾಯಿ ಒಡೆಯುವುದು. ಗಡಿಮಾರಿ ಕಳಿಸುವುದು. ಗಡಿ ಶಾಂತಿಯ ವ್ಯವಸ್ಥೆ ಮಾಡುವುದು. ಕಾರ್ತಿಕ ದೀಪೋತ್ಸವದ ಸಮಯದಲ್ಲಿ ತೋರಣ ಹಾಕುವುದು. ಮುಂಡಗಿ ತರುವುದು. ಪಣತಿ ಹಚ್ಚುವ ವ್ಯವಸ್ಥೆ ಮಾಡುವುದು. ಮಂಡಕ್ಕಿ ಪ್ರಸಾದ ಹಂಚುವುದು. ರಥದ ಮರವನ್ನು ತರುವುದು. ಈ ಹಕ್ಕು ಕಟ್ಟೇರ ಕುಟುಂಬಕ್ಕೆ ಮಾತ್ರ ಸೇರಿದೆ.

**5. ಶಿರಸಿಯ ರೈತ ಮುಖ್ಯಸ್ಥರು ಮೂವರು :**

(1). ಗುಡ್ಡದಮನೆ ಬದಿಯಿಂದ

(2). ಕೊಟ್ನಗೇರಿ ಬದಿಯಿಂದ

(3).ಹೊಸಪೇಟೆ ಬದಿಯಿಂದ

ಎಂದು ಇವರನ್ನು ಗುರುತಿಸಲಾಗಿದ್ದು ಇವರು ಹೊರಬೀಡುಗಳಲ್ಲಿ ಅಡಿಗೆ ಮಾಡುವ ಮತ್ತು ಪಡಲಿಗೆಗಳಲ್ಲಿ ಉಡಿ ಸಾಮಾನು ತುಂಬುವ ಕೆಲಸಗಳನ್ನು ಬಿಟ್ಟು ಮೆಲೆ. ಅ.ನಂ. 4 ರಲ್ಲಿ ವಿವರಿಸಿದ ಕೆಲಸಗಳನ್ನು ನಿರ್ವಹಿಸುತ್ತಾರೆ. ಗುಡ್ಡದಮನೆ ರೈತ ಮುಖ್ಯಸ್ಥರು ರಥದ "ಮೂಕದ" ಮರವನ್ನು ಕೊಟ್ನಗೇರಿ ರೈತ ಮುಖ್ಯಸ್ಥನು ರಥದ "ಅಚ್ಚಿನ" ಮರವನ್ನು ತರುತ್ತಾರೆ.ಎ

**6. ಶಿರಸಿ ಚಕ್ರಸಾಲಿ (ಕುಂಬಾರ ಕುಟುಂಬ :**

ಜಾತ್ರೆಯ ಸಲುವಾಗಿ ಮಣ್ಣಿನ ಪಾತ್ರೆಗಳನ್ನು ಕ್ರಯ ಪಡೆಯದೇ ಪೂರೈಸುವ ಜವಾಬ್ದಾರಿ ಇವರದ್ದಾಗಿದ್ದು ಜಾತ್ರೆಯ ಪ್ರತಿಷ್ಠೆಯ ಎರಡನೇ ಪೂಜೆಯನ್ನು ಮಾಡುವುದು, ಪ್ರತಿಷ್ಠೆಯ ಮರುದಿನ ಬಲಿ ತಯಾರಿಸುವುದು ಇತ್ಯಾದಿ ಜವಾಬ್ದಾರಿ ಇವರಿಗಿದೆ.

**7. ಶಿರಸಿ ಕೇದಾರಿ ಕುಟುಂಬ :**

ಜಾತ್ರೆಯ ಪ್ರತಿಷ್ಠೆಯ ದಿನ ಮೂರನೇ ಪೂಜೆ (ಚೌತಮನೆ ಪೂಜೆ)ಯನ್ನೂ ರೈತರ ವತಿಯಿಂದ ಇವರು ಮಾಡುತ್ತಾರೆ.

**8. ಶಿರಸಿ ಮಡಿವಾಳ ಕುಟುಂಬ :**

ಜಾತ್ರೆಯ ಚಪ್ಪರದಲ್ಲಿ  ಹಾಗೂ ಕಾರ್ತೀಕ ದೀಪೋತ್ಸವದಲ್ಲಿ, ಜಯಂತಿ ಉತ್ಸವದಲ್ಲಿ ಹಳದಿ ವಸ್ತ್ರ(ಮೇಲ್ಹಾವಣಿ ವಸ್ತ್ರ) ಕಟ್ಟುವುದು. ಶ್ರೀ ದೇವಿಯು ಜಾತ್ರಾ ಗದ್ದಿಗೆಯಿಂದ ಹೊರಡುವಾಗ ಪ್ರತಿಷ್ಠೆಯ ಗದ್ದಿಗೆಯಿಂದ ರಥದವರೆಗೆ, ರಥದಿಂದ ಜಾತ್ರೆಯ ಗದ್ದಿಗೆಯವರೆಗೆ ದಾರಿಯಲ್ಲಿ ವಸ್ತ್ರ ಹಾಸುವುದು. ಪಲ್ಲಕ್ಕಿ ಕೂಡುವ ಎಲ್ಲ ಗದ್ದಿಗೆಗಳ ಮೇಲೆ ವಸ್ತ್ರ ಹಾಸುವುದು. ದೀವಟಿಗೆಗಳಿಗೆ ವಸ್ತ್ರದ ಕೋಡುಬಳೆ ಪೂರೈಸುವುದು, ಕಾರ್ತೀಕ ದೀಪೋತ್ಸವದಲ್ಲಿ ಹಣತಿ ಮತ್ತು ಸಮೆಗಳಿಗೆ ಬತ್ತಿ ಪೂರೈಸುವುದು.

**9. ಶಿರಸಿ ಕುರುಬರ ಕುಟುಂಬ :**

ಪಲ್ಲಕ್ಕಿ ಮತ್ತು ಇತರ ಉತ್ಸವಗಳಲ್ಲಿ ಡೊಳ್ಳು ಬಾರಿಸುವುದು.

10. **ಶಿರಸಿ ಟಿಕಾರೆ ಕುಟುಂಬ** :

ಪಲ್ಲಕ್ಕಿ ವಸ್ತ್ರಗಳನ್ನು ದುರಸ್ತಿ ಮಾಡುವುದು, ಜಾತ್ರೆಯ ಬಗ್ಗೆ ಬೇಕಾದ ನಿಶಾನೆ ಮತ್ತು ವಸ್ತ್ರಗಳನ್ನು ಹೊಲಿದು ಕೊಡುವುದು.

**11. ಶಿರಸಿಯ**

೧). ಮಾರಿಗುಡಿ ಶೆಟ್ಟಿ

೨). ಅಣವೇಕರ ಶೆಟ್ಟಿಯ ಕುಟುಂಬಗಳು

ಈ ಎರಡೂ ಕುಟುಂಬದವರು ಶ್ರೀ ದೇವರ ಆಭರಣಗಳ ಕಿರುಕೋಳ ರಿಪೇರಿ ಮಾಡುವುದು. ಆಗಾಗ್ಗೆ ಎಲ್ಲ ಆಭರಣಗಳನ್ನು ತೊಳೆಯುವ ಜವಾಬ್ದಾರಿ ಹೊಂದಿರುತ್ತಾರೆ.

**12. ಶಿರಸಿ ಉಪ್ಪಾರ ಕುಟುಂಬ :**

ಪಲ್ಲಕ್ಕಿ ಹೊರುವುದು, ರಥದ ಗೂಡನ್ನು ತಯಾರಿಸುವುದು, ಸೊನ್ನೆಯನ್ನು ರಥಕ್ಕೆ ಕೊಡುವುದು, ಜಾತ್ರೆಯ ನಂತರ ರಥವನ್ನು ಬಿಚ್ಚುವುದು ಇತ್ಯಾದಿ ಕರ್ತವ್ಯಗಳನ್ನು ಹೊಂದಿರುತ್ತಾರೆ.

**13. ಶಿರಸಿ ಎರಡು ಪೂಜಾರಿ ಕುಟುಂಬ, ಒಂದು ಆಚಾರಿ ಕುಟುಂಬ, ಬಚಗಾಂವ ಬಡಗಿ ಕುಟುಂಬ :**

ಈ  ಎಲ್ಲ ನಾಲ್ಕು ಕುಟುಂಬಗಳು ರಥವನ್ನು ತಯಾರಿಸುವ, ಶ್ರೀ ದೇವಿಯ ವಿಗ್ರಹಗಳನ್ನು ಕಳಚುವುದು, ಕೂಡಿಸುವುದು. ಕಾರ್ತೀಕ ದೀಪೋತ್ಸವದಲ್ಲಿ  ಹಣತಿ ಇಡುವ ಬಗ್ಗೆ ಬೇಕಾದ ಕಟ್ಟಿಗೆ ಕೆಲಸ ಮಾಡುವುದು ಇತ್ಯಾದಿ.

**14. ಶಿರಸಿ ಸೀಮೆಯ ೯ ಗ್ರಾಮದ ಮುಖ್ಯಸ್ಥರು :**

೧.ಲಿಂಗದ ಕೋಣ ಇಬ್ಬರು

೨.ರಾಗಿ ಹೊಸಳ್ಳಿಯ ಒಬ್ಬರು

೩. ಎಸಳೆ, ಭಿಕ್ಕನಳ್ಳಿ, ನರೇಬೈಲು, ಬಚಗಾಂವ, ಪೆಡಂಬೈಲು, ಲಂಡಕನಹಳ್ಳಿಯ ಒಬ್ಬೊಬ್ಬ ಮುಖ್ಯಸ್ಥ.

ಜಾತ್ರೆಯ ದಿನಗಳಲ್ಲಿ ಸೇವೆಯನ್ನು ಒಪ್ಪಿಸಬಯಸುವ ಭಜಕರ ವ್ಯವಸ್ಥೆಯನ್ನು ಲಿಂಗದಕೋಣದ ಇಬ್ಬರು ಮುಖ್ಯಸ್ಥರು ನೋಡಿಕೊಳ್ಳುತ್ತಾರೆ.

ತುಲಾಭಾರದ ಬುಟ್ಟಿ, ಬೆತ್ತದ ಹಗ್ಗ, ಮೊದಲಾದ ಬೆತ್ತದ ಸಾಮಾನುಗಳನ್ನು ರಾಗಿಹೊಸಳ್ಳಿಯ ಮುಖ್ಯಸ್ಥರು ಪೂರೈಸುತ್ತಾರೆ.

ಉಳಿದವರು ಅ.ನಂ. ೪ ನೇ ರೈತ ಪ್ರಮುಖರಿಗೆ ಸಹಾಯ ಮಾಡುತ್ತಾರೆ. ಜೊತೆಗೆ ತಮ್ಮ ಗ್ರಾಮದಿಂದ ಮಾರಿಪಟ್ಟಿ ಅಕ್ಕಿ ವಸೂಲಿ ಮಾಡುವರು.

ಬಚಗಾಂವ ಮುಖ್ಯಸ್ಥರು ಕಾರ್ತೀಕ ಮತ್ತು ಜಾತ್ರೆಯಲ್ಲಿ ಹೆಬ್ಬಾಗಿಲ ತೋರಣ ಕಟ್ಟುವರು. ಬಚಗಾವಿ, ಪೆಡಂಬೈಲು ಮುಖ್ಯಸ್ಥರು ನಿಶಾನೆಗಳನ್ನು ವಾಟೇಗಳಕ್ಕೆ ಸುರಿದು ಕೊಡುವರು. ಎಸಳೇ, ಪೆಡಂಬೈಲ ದವರು ಕಾರ್ತೀಕದ ಬಗ್ಗೆ ಬಾಳೆಗಿಡ ಪೂರೈಸುವರು.

15. **ಶಿರಸಿಯ ಮೇಟಿ ಕುಟುಂಬ** :

ಅಂಕೆ ( ವಿಸರ್ಜನೆ) ಹಾಕುವ ದಿನದಿಂದ ಜಾತ್ರೆಯ ಮುಕ್ತಾಯದವರೆಗೆ ಹೆಪ್ಪಿನ ಸ್ಥಳದಲ್ಲಿ ಶ್ರೀ ದೇವಿಯು ಹೋಗುವವರೆಗೆ ಮೇಟಿ ದೀಪವನ್ನು ಹಗಲು ರಾತ್ರಿ ಕಾಯುವುದು.

**16. ಶಿರಸಿ ಚಲುವಾದಿ ಮುಖ್ಯಸ್ಥ :**

ಜಾತ್ರೆ ಮತ್ತು ಇತರ ಉತ್ಸವಗಳಲ್ಲಿ ತೋರಣಕ್ಕೆ ಬೇಕಾದ ಮಾವಿನಸೊಪ್ಪು ತರುವುದು. ಕಾರ್ತೀಕ ದೀಪೋತ್ಸವ ಮತ್ತು ಜಾತ್ರೆಯ ಪ್ರತಿಷ್ಠೆಯ ದಿನ ಒಳ ಆವಾರದ ಸುತ್ತಲೂ ತೊಳೆಯುವುದು.

ರಥದ ಗಾಲಿಗಳಿಗೆ ಸಾಕಷ್ಟು ಮೊದಲು ಎಣ್ಣೆ ಕುಡಿಸುವುದು, ಕಳಚುವುದು, ಗಾಲಿಗಳನ್ನು ನಿಯಂತ್ರಿಸಿ ರಥದ ಸಾಗುವಿಕೆ ಸರಳಗೊಳಿಸುವುದು. ಹೊರಬೀಡುಗಳ ಅಡಿಗೆಗೆ ಕಟ್ಟಿಗೆ ಪೂರೈಸುವುದು. ಶ್ರೀ ದೇವಿಯ ಗದ್ದಿಗೆಗಳ ಆಸುಪಾಸ ಸ್ವಚ್ಛ ಮಾಡುವುದು. ಹೊರಬೀಡಿನ ಊಟದ ಮೊದಲಿನ ದಿನ ನೀರಿನ ಹೊಂಡಗಳನ್ನು ಸ್ವಚ್ಛವಾಗಿರಿಸುವುದು. ಕಾರ್ತೀಕ ದೀಪೋತ್ಸವದಲ್ಲಿ ಹಣತೆ ಇಡುವುದು. ಚಲುವಾದಿ ಜೋಗತಿಯರ ಸಹಾಯದಿಂದ ಬೇವಿನ ಉಡಿಗೆ ಬಿಚ್ಚುವುದು. ರಥದ ಸಾಮಗ್ರಿಗಳನ್ನು ಉಗ್ರಾಣದಿಂದ ಹೊರ ತರುವುದು ಹಾಗೂ ಪುನಃ ಇದ್ದ ಸ್ಥಳದಲ್ಲೇ ಇಡುವುದು.

17. **ಶಿರಸಿಯ ಎರಡು ಮೇತ್ರಿ ಕುಟುಂಬದವರು** :

.೧. ಫಕೀರಾ ಕುಟುಂಬ : ಹೊರಬೀಡುಗಳಲ್ಲಿ ಅವಶ್ಯವಿದ್ದ ಕೆಲಸ ಮಾಡುವುದು. ಜಾತ್ರೆಯ ಬುಧವಾರ ಬಲಿ ಕೆಲಸವನ್ನು ಮಾಡುವುದು. ವಿಸರ್ಜನೆಯ ದಿನ ಕೋಣನಿಗೆ ಉಡಿ ಸಾಮಾನು ಕಟ್ಟುವುದು. ಮೊದಲನೇ ಹೊರಬೀಡಿನಲ್ಲಿ ಮಾತಂಗಿ ಪೂಜೆ ಮಾಡುವುದು. ಮೇತ್ರಿ ಜೋಗ್ತಿಯ ಸಹಾಯದಿಂದ ಬೇವಿನ ಉಡಿಗೆ ಬಿಚ್ಚುವುದು. ರಂಗದ ಸ್ಥಳ ಸಾರಿಸುವುದು. ಜಾತ್ರೆಯ ಮಂಟಪದ ದ್ವಾರದಲ್ಲಿ ಗಾವದ ಹೊಂಡ ತೋಡುವುದು.

೨. ಆಯಿತ್ರಾ ಕುಟುಂಬ : ಉತ್ಸವದ ಪ್ರಸಂಗದಲ್ಲಿ ಹಲಗೆ ಬಾರಿಸುವುದು.

**18. ಎಸಳೆ ಮೇದಾರರ ಕುಟುಂಬ :**

ಪ್ರತಿಷ್ಠೆಯ ಪೂಜೆಯ ಬಗ್ಗೆ ಬೇಕಾಗುವ ಬುಟ್ಟಿ, ವಗೈರೆ ಬಿದಿರಿನ ಸಾಮಾನುಗಳನ್ನು ಪೂರೈಸುವುದು. ರಥದ ಬಗ್ಗೆ ತಟ್ಟಿ ಮೊದಲಾದವುಗಳನ್ನು ಪೂರೈಸುವುದು.

19. **ನೀಲೆಕಣಿ ಗುಡಿಗಾರರ ಕುಟುಂಬ** :

ಜಾತ್ರೆಯ ಸಮಯದಲ್ಲಿ ಶ್ರೀ ದೇವಿಯ ಕಲ್ಯಾಣ ಉತ್ಸವಕ್ಕೆ ಬೆಂಡಿನ ಬಾಸಿಂಗ ಮತ್ತು ಝೂಲರಿ ಗಳನ್ನು ಪೂರೈಸುವುದು. ಕಾರ್ತೀಕದಲ್ಲಿ ಬೆಂಡಿನ ಮಾಲೆ ಪೂರೈಸುವುದು.

**20. ಶಿರಸಿ ಮಚಗಾರರ ಮೂರು ಮುಖ್ಯಸ್ಥರು :**

ಜಾತ್ರಾ ಉತ್ಸವದಲ್ಲಿ ಬಲಿ ಸೇವೆಯಲ್ಲಿ ಇವರ ಸಹಾಯ ಬೇಕಾಗುತ್ತದೆ. ಹೊರಬೀಡಿನಲ್ಲಿ ಕೆಲಸ ಮಾಡುತ್ತಾರೆ. ಕಾರ್ತೀಕ ಉತ್ಸವದಲ್ಲಿ ಬಾಳೆಗಿಡ ತರುವುದು ಇತ್ಯಾದಿ.

**21. . ಶಿರಸಿ ಸಮಗಾರರ ಐವರು ಮುಖ್ಯಸ್ಥರು :**

ನವರಾತ್ರಿಯಲ್ಲಿ ಶ್ರೀ ಹನುಮಂತ ದೇವರ ಅಂಗಳ ಸ್ವಚ್ಛ ಮಾಡುವುದು. ಕಾರ್ತೀಕ ಉತ್ಸವದಲ್ಲಿ ಬಾಳೆ ಗಿಡ ತರುವುದು. ಹೊರಬೀಡಿನಲ್ಲಿ ಕೆಲಸ ಮಾಡುವುದು. ಜಾತ್ರೆಯ ಕಾಲದಲ್ಲಿ ರಥದ ದಾರಿಯಲ್ಲಿ ಇಕ್ಕೆಲಗಳಲ್ಲಿ ಅಡಿಕೆ ಮರ ನಿಲ್ಲಿಸುವುದು. ಬಲಿ ಕೆಲಸಕ್ಕೆ ಸಹಾಯ ಮಾಡುವುದು.

22. **ಶಿರಸಿ ಬೇಡರ ಜೋಗತಿಯರ ನಾಲ್ಕು ಕುಟುಂಬಗಳು** :

ಎಲ್ಲ ಉತ್ಸವಗಳಲ್ಲಿ ಮತ್ತು ಪಲ್ಲಕ್ಕಿ ಉತ್ಸವಗಳಲ್ಲಿ ಚಾಮರ ಬೀಸುವುದು. ನವರಾತ್ರಿ ಮತ್ತು ಜಾತ್ರೆಯಲ್ಲಿ ಪಡಲಿಗೆ ಹೊರುವುದು. ತಿಂಗಳಿಗೆ ಎರಡು ಸಲ ಗರ್ಭಗುಡಿಯ ನೆಲ ತೊಳೆಯುವುದು. ಬೇವು ತಂದು ಹರಕೆಯ ಬೇವಿನ ಉಡಿಗೆ ಉಡಿಸುವುದು. ರಥದ ಮರ ತರುವಾಗ, ಕಲಶವನ್ನು ರಥದ ಮೇಲೆ ಏರಿಸುವಾಗ ಹಾಜರ ಇರುವುದು. ಜಾತ್ರೆಯ ಕಾಲಕ್ಕೆ ನಾಡಿಗ, ಕುಂಬಾರ, ಕೇದಾರಿ, ಪೂಜಾರಿ, ಗಾಳಿಮಾರಿ , ಮೇಟಿಯವರನ್ನು ಅವರ ಕೆಲಸಕ್ಕಾಗಿ ಕರೆ ತರುವುದು. ಗಡಿ ಶಾಂತಿಯ ಸಮಯದಲ್ಲಿ ಹಾಜರಿರುವುದು.

**23. ಚಲುವಾದಿ ಜೋಗತಿಯರ ಐದು ಕುಟುಂಬಗಳು :**

ಗಡಿ ಶಾಂತಿ, ಹೊರಬೀಡುಗಳಲ್ಲಿ ಪಡ್ಲಿಗೆ ಹೊರುವುದು, ಬೇವಿನ ಉಡಿಗೆ ಬಿಚ್ಚುವುದು. ಪೂರ್ವ ದಿಕ್ಕಿನಲ್ಲಿ ನಡೆಯುವ ಹೊರಬೀಡಿನಲ್ಲಿ ತಮ್ಮ ಪಡಲಿಗೆಗಳನ್ನು ಪೂಜಿಸುವ ಹಕ್ಕು ನಾಗಿ ಕುಟುಂಬಕ್ಕೆ ಸೇರಿದ್ದು. ಮಾದೇವಿ ಕುಟುಂಬವು ಎಲ್ಲ ಹೊರಬೀಡುಗಳಲ್ಲಿ ಹಣತಿ ದೀಪ ಒಯ್ಯುವುದು.

24. **ಶಿರಸಿ ಮೇತ್ರಿ ಜೋಗತಿ ಕುಟುಂಬ** :

ಹೊರಬೀಡು ಗಡಿ ಶಾಂತಿಯಲ್ಲಿ ಪಡ್ಲಿಗೆ ಹೊರುವುದು, ಬೇವಿನ ಉಡಿಗೆ ಬಿಚ್ಚುವುದು ಇತ್ಯಾದಿ.

25. **ಶಿರಸಿ ಗಾಳಿಮಾರಿ ಜೋಗತಿ ಕುಟುಂಬ** :

ಶುಕ್ರವಾರದ ಹೊರಬೀಡುಗಳಲ್ಲಿ ಗಾಳಿಮಾರಿ ಗದ್ದಿಗೆಯ ಹತ್ತಿರ ಪಡಲಿಗೆಗಳ ಪೂಜೆ ಮಾಡುವುದು. ಪ್ರತಿಷ್ಠೆಯ ದಿನ ಘಟಸ್ಥಾಪನೆ ಮಾಡುವುದು ಮತ್ತು ಜಾತ್ರೆಯ ಕೊನೆಯ ದಿನ ಮುಕ್ತಾಯದ ವಿಧಾನ ಮಾಡುವುದು. ಹೆಪ್ಪಿನ ಗದ್ದಿಗೆಗೆ ಹೆಪ್ಪಿನ ಗಡಿಗೆ ಒಯ್ಯುವುದು. ಎಲ್ಲ ಹೊರಬೀಡುಗಳಲ್ಲಿ ಪಡ್ಲಿಗೆ ಒಯ್ಯುವುದು.

26. **ಶಿರಸಿ ಅಸಾದಿ ಕುಟುಂಬ** :

ಜಾತ್ರೆಯ ಚಪ್ಪರದಲ್ಲಿ ರಂಗ ಇಡುವುದು.ಜಾತ್ರೆಯ ದಿನಗಳಲ್ಲಿ ಶ್ರೀ ದೇವಿಯ ಎದುರು ಹಾಡುವುದು , ಕುಣಿಯುವುದು. ಜಾತ್ರೆಯ ಗದ್ದಿಗೆಯಿಂದ ಶ್ರೀ ದೇವಿಯು ಎದ್ದ ಮೇಲೆ ಹುಲುಸು, ಗಾವ, ಹೆಪ್ಪು ವಿಸರ್ಜನ ವಿಧಿಗಳನ್ನು ಮಾಡುವುದು. ಮಾರಿಪಟ್ಟೆ ಅಕ್ಕಿ ಕೊಟ್ಟ ಶಿರಸಿ ಊರಿನ ರೈತರಿಗೆ ಹುಲುಸು ಕೊಡುವುದು. ಹಾರುಗೋಳಿ ಹಾರಿಸುವುದು. ಜಾತ್ರೆಯ ಚಪ್ಪರದಲ್ಲಿ ಹೊನ್ನಾಟ ಆಡುವುದು. ಜಟಕದ ಪೂಜೆ ಮಾಡಿ ಅದಕ್ಕೆ ಸಾತ್ವಿಕ ಬಲಿ ಸಮರ್ಪಿಸುವುದು. ಯುಗಾದಿಯ ದಿನ ಶ್ರೀ ದೇವಸ್ಥಾನದಲ್ಲಿ ರಂಗ ಹಾಕುವುದು. ಕೋಣನ “ಮಾಳಪಕ್ಷ ” ಆಚರಿಸುವುದು.

**27. ಶಿರಸಿ ಕಾಳೀ ಕುಟುಂಬ :**

ಎಲ್ಲ ಪಲ್ಲಕ್ಕಿ ಉತ್ಸವಗಳಲ್ಲಿ ಹಾಗೂ ಇತರ ಉತ್ಸವಗಳಲ್ಲಿ ಕಾಳಿ ಬಾರಿಸುವುದು.

28. **ಶಿರಸಿ ಉಗ್ರಾಣಿ ಕುಟುಂಬ** :

ಬಾಬುದಾರ ಮತ್ತು ರೈತರನ್ನು ಕರೆಯಲು ಹೋಗುವುದು. ಹಳ್ಳಿಗಳಲ್ಲಿ ಮಾರಿಪಟ್ಟಿ ಪಾವತಿ ಪುಸ್ತಕಗಳನ್ನು ಹಂಚುವುದು. ತುಲಾಭಾರದ ಕೆಲಸಕ್ಕೆ ಸಹಾಯ ಮಾಡುವುದು. ಜಾತ್ರೆಯ ಕೆಲಸದಲ್ಲಿ ದೂತನಾಗಿ ಕೆಲಸ ಮಾಡುವುದು.

**29. ಶ್ರೀ ಹನುಮಂತ ದೇವಸ್ಥಾನದ ಪೂಜಾರಿಯ ಕುಟುಂಬ:**

ಶ್ರೀ ದೇವಾಲಯದ ಆಡಳಿತಕ್ಕೆ ಒಳಪಟ್ಟ ಹನುಮಂತ ದೇವರ ಅರ್ಚಕತನ.

**30. ಈ ಕೆಳಗಿನ ಗ್ರಾಮಗಳ ಮುಖ್ಯಸ್ಥರು :**

| | | | |
|---|---|---|---|
| ೧. ಬಾಳೆಗದ್ದೆ | ೨. ಮುಂಡತೋಟ | ೩.ಕುಂಬ್ರಿ | ೪.ಮುಂಡಗೇಸರ |
| ೫.ಆಲೇಸರ | ೬. ಮೋಟಿನಸರ | ೭. ಕಲ್ಕುಣಿ | ೮. ಅರಸಿಕೇರೆ |
| ೯. ಕೆರೇಕೈ | ೧೦. ಕುಳವೆ | ೧೧. ಸಣ್ಣಳ್ಳಿ | ೧೨.ಆರಳೀಹದ್ದ |
| ೧೩. ಕಾನಳ್ಳಿ | ೧೪. ಜಾನ್ಮನೆ | ೧೫. ಕಲಗಾರ | ೧೬. ಯಡಳ್ಳಿ |
| ೧೭. ಹೀಪನಳ್ಳಿ | ೧೮. ಶಿರಸಿಮಕ್ಕಿ | ೧೯. ಚಿಪಗಿ | |

ಇವರುಗಳು ತಮ್ಮ ಗ್ರಾಮದವರಿಂದ ನಗದಿ ಮಾರಿಪಟ್ಟಿಯನ್ನು ವಸೂಲು ಮಾಡುವುದು. ಅ.ನಂ. 3—4-5-6-7-9-16-17 ಮತ್ತು 19 ನೇ ಗ್ರಾಮದವರು ಕಾರ್ತೀಕೋತ್ಸವಕ್ಕೆ ಬಾಳೆ ಗಿಡ ಪೂರೈಸುವುದು. ಕಲಗಾರ ಗ್ರಾಮದವರು ರಥಕ್ಕೆ ಬೇಕಾಗುವ ವಾಟೆಗಳ ( ನಿಶಾನೆ ಸುರಿಯಲಿಕ್ಕೆ) ಪೂರೈಸುವುದು.

ಎಲ್ಲ ಬಾಬುದಾರರಿಗೆ ಅವರವರ ಸೇವೆಗನುಗುಣವಾಗಿ ಪ್ರಸಾದರೂಪಿ ಪ್ರತಿಫಲ ದೊರೆಯುವುದು.